ಸಂಘದಲ್ಲಿ 8 ಲಕ್ಷ ರೂಪಾಯಿಗಳ ಅವ್ಯವಹಾರ ಆದ ಬಗ್ಗೆ ನಾನು ತಮ್ಮಲ್ಲಿ ವಿನಂತಿಸಿಕೊಂಡಿದ್ದೆ.

ಅಧ್ಯಕ್ಷರು:- ಅದನ್ನು ಬರೆದು ಕಳುಹಿಸಿ.

9) ಸಿಂಧನೂರು ತಾಲ್ಲೂಕು ಸಹಕಾರ ಸಂಘಕ್ಕೆ ಸೇರಿದ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಯೂನಿಟ್‌ಗಳನ್ನು ವ್ಯಾಪಾರಸ್ಥರಿಗೆ ಗುತ್ತಿಗೆ ಕೊಡುವ ಪ್ರಸ್ತಾವನೆ.

ಶ್ರೀ ಬದ್ರಾಳಿ ಹಂಪನಗೌಡ:- ನಾನು ಬರೆದು ಕಳುಹಿಸಿದ್ದೇನೆ. ಮೊನ್ನೆ ಶನಿವಾರದ ದಿನವೇ ಕೊಟ್ಟಿದ್ದೇನೆ. ಈಗ ಇದರಲ್ಲಿ ತಾಲ್ಲೂಕು ಸಹಕಾರ ಹುಟ್ಟುವಳಿ ಸಂಘದ ಆಡಿಯಲ್ಲಿ ಎರಡು ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಯೂನಿಟ್ ಇವೆ. ಈಗ ಪ್ರೆಸ್ಸಿಂಗ್ ಮತ್ತು ಜಿನ್ನಿಂಗ್ ಯೂನಿಟ್ ಅನ್ನು ಗುತ್ತಿಗೆಯ ಆಧಾರದ ಮೇಲೆ ಕೊಡಬೇಕು; ಎಂದು ಹೇಳಿ ಅಲ್ಲಿ ವ್ಯಾಪಾರಸ್ಥರ ಕಡೆಯಿಂದ 8 ಲಕ್ಷ ರೂಪಾಯಿಗಳ ಅಡ್ವಾನ್ಸ್ ತೆಗೆದುಕೊಂಡು ಗುತ್ತಿಗೆಯ ಆಧಾರದ ಮೇಲೆ ನೀಡಬೇಕೆಂದು ಒಂದು ಪ್ರಸ್ತಾವನೆಯನ್ನು ಇಲಾಖೆಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಕಳುಹಿಸಿಕೊಡುವಾಗ ಏನಾಗಿದೆ ಎಂದರೆ, ದಿನ ಪತ್ರಿಕೆಯಲ್ಲಿ ಪ್ರಕಟಣೆಯಾಗಿ ಇಲಾಖೆಗೆ ಕಳುಹಿಸಿದ್ದು ಒಂದು, ಪ್ರತಿನಿತ್ಯ ಸರ್‌ಕ್ಯೂಲೆಟ್ ಆಗಿದ್ದು ಒಂದು. ಈ ಎರಡು ಪತ್ರಿಕೆಗಳು ನನ್ನ ಬಳಯಲ್ಲಿ ಇವೆ. ಮತ್ತು ಆ ಪ್ರಸ್ತಾವನೆ ಏನಾಗಿದೆ ಎಂದರೆ, ...

ಅಧ್ಯಕ್ಷರು:- ಅದನ್ನೆಲ್ಲಾ ಕೋ-ಆಪರೇಷನ್ ಮಿನಿಸ್ಟರ್‌ಗೆ ಕಳುಹಿಸಿಕೊಡಿ. ಅದನ್ನು ಅವರು ನೋಡುತ್ತಾರೆ.

ಶ್ರೀ ಬದ್ರಾಳಿ ಹಂಪನಗೌಡ:- ಆಯಿತು.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಶ್ರೀಮತಿ ಮೋಟಮ್ಮನವರು, ನಾನು ಮತ್ತಿತರರು ಗಮನ ಸೆಳೆಯುವ ಸೂಚನೆ ಕಳುಹಿಸಿ 8-10 ದಿವಸಗಳ ಮೇಲಾಗಿದೆ. ಅದು ಏನೆಂದರೆ ರಾಜ್ಯದ ಇಲಾಖೆಗಳಲ್ಲಿ ಮೀಸಲಾತಿಯ ಬಗ್ಗೆ ಕಳುಹಿಸಿದ್ದುದು. ಅದು ಇವತ್ತಿನವರೆಗೂ ಬರಲಿಲ್ಲ. ನಾನು 4-5 ದಿವಸಗಳ ಹಿಂದೆ ನಮ್ಮ ಗಮನ ಸೆಳೆಯುವ ಸೂಚನೆ ಬರಬೇಕು ಎಂದು ಸೆಕ್ರೆಟರಿಯವರಿಗೆ ಕಾಗದ ಬರೆದಿದ್ದೆ. ಅದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:- ನಾಳೆ ತೆಗೆದುಕೊಳ್ಳೋಣ.

ಶ್ರೀಮತಿ ಮೋಟಮ್ಮ:- ನಾವು 6 ಜನ ಸದಸ್ಯರು ಸೂಚನೆ ಕಳಿಸಿದ್ದೇವೆ.

ಅಧ್ಯಕ್ಷರು:- ಆಗಬಹುದು.

11.40 ಎ.ಎಂ.

ಶ್ರೀ ಎನ್. ಚಿಕ್ಕೇಗೌಡ:- ಮಾನ್ಯ ಅಧ್ಯಕ್ಷರೇ ನಾನು ಅತೀ ಮುಖ್ಯವಾದ ಒಂದು ವಿಚಾರದಲ್ಲಿ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟು 8-10 ದಿವಸ ಆಗಿದೆ. ಎಲ್ಲರದ್ದೂ ಬರುತ್ತಾ ಇದೆ ಆದರೆ ನಾನು ಕಳುಹಿಸಿದ್ದ ಗಮನ ಸೆಳೆಯುವ ಸೂಚನೆಗೆ ಉತ್ತರ ಒದಗಿಸುವ ಹಾಗೆ ತಾವು ಆದೇಶ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಸಿ. ಬೈರೇಗೌಡ:- ನಿನ್ನೆ ದಿವಸ ತಮ್ಮ ಗಮನಕ್ಕೆ ಮತ್ತು ಸಭೆಯ ಗಮನಕ್ಕೆ ಒಂದು ವಿಷಯವನ್ನು ತಂದಿದ್ದೆ. ಏನೆಂದರೆ ರಾಷ್ಟ್ರ ಮಟ್ಟದಲ್ಲಿ ವಿದ್ಯುಚ್ಛಕ್ತಿ ಸಚಿವರ ಸಮ್ಮೇಳನ ದೆಹಲಿಯಲ್ಲಿ ನಡೆದಿದೆ. ಅಲ್ಲಿ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ.....

ಅಧ್ಯಕ್ಷರು:- ಈ ವಿಚಾರವನ್ನು ನಾಳೆ ಚೀಫ್ ಮಿನಿಸ್ಟರ್ ಇರುವಾಗ ರೈಸ್ ಮಾಡಿ.